ನಕ್ಕುಬಿಡಿ






## ರೇಡಿಯೋ ನೇರ ಪ್ರಸಾರ

ರಾಮು ರೇಡಿಯೋ ಸ್ಟೇಷನ್‌ಗೆ ಕರೆಮಾಡಿದ

ರಾಮು: ಹಲೋ, ಇದು ರೇಡಿಯೋ ಸ್ಟೇಷನ್ನಾ?

ರೇಡಿಯೋ ಜಾಕಿ.: ಹೌದು ಸಾರ್, ನೀವು ನಮ್ಮ ಮೊದಲನೆ ಕಾಲರ್, ಕಂಗ್ರಾಜುಲೇಷನ್ಸ್! ನಿಮ್ಮ ಹೆಸರೇನು ಪ್ಲೀಸ್...

ರಾಮು: ನಾನು 'ರಾಮು' ಅಂತ. ಇದು ನೇರಪ್ರಸಾರ ಕಾರ್ಯಕ್ರಮ ಅಲ್ವಾ? ನಾನು ಮಾತಾಡಿದ್ದು ಊರೋರಿಗೆಲ್ಲಾ ಕೇಳತ್ತಲ್ವಾ?

ರೇ.ಜಾ.: ಖಂಡಿತಾ ಸಾರ್, ರೇಡಿಯೋದಲ್ಲಿ ಈ ಪ್ರೋಗ್ರಾಂ ಕೇಳ್ತಾ ಇರೋರೆಲ್ಲರಿಗೂ ನಿಮ್ಮ ಧ್ವನಿ ಕೇಳುತ್ತೆ.

ರಾಮು: ನನ್ನ ತಂಗಿ ಮನೇಲಿ ರೇಡಿಯೋ ಪ್ರೊಗ್ರಾಂ ಕೇಳ್ತಿದ್ದಾಳೆ... ನಾನು ಅವಳಿಗೊಂದು ಮೆಸೇಜ್ ಹೇಳ್ಬೋದಾ...?

ರೇ.ಜಾ.: ಓ... ಖಂಡಿತಾ ಸಾರ್... ಏನು ಹೇಳಿ ತಮ್ಮ ಮೆಸೇಜ್...

ರಾಮು: ಲೇ... ಪದ್ಮಾ... ನಾನು ಟಾಯ್ಲೆಟ್ ರೂಮಲ್ಲಿದ್ದೀನಿ ಕಣೇ... ಇಲ್ಲಿ ನೀರು ಬರ್ತಾ ಇಲ್ಲ. ಪಂಪ್ ಆನ್ ಮಾಡು... ನಿನ್ ಮೊಬೈಲಿಗೆ ಕಾಲ್ ಮಾಡ್ದೆ, ಸ್ವಿಚ್ ಆಫ್ ಆಗಿದೆ. ಬೇಗ ಮಾಡೇ..

★★★

## ಪುಟ್ಟನ ರೀಡಿಂಗ್ ಟೈಂ

ಅಪ್ಪ: ಪುಟ್ಟು, ನೀನು ಬೆಳಗಿನ ಸಮಯವೆಲ್ಲ ಟಿವಿ, ಮೊಬೈಲು, ಫ್ರೆಂಡ್ಸಂತೆಲ್ಲ ವ್ಯರ್ಥ ಮಾಡ್ತೀಯಲ್ಲ ಯಾವಾಗ ಓದ್ತೀಯಾ?

ಪುಟ್ಟು: ನಾನು ಯಾವಾಗ್ಲೂ ರಾತ್ರೀನೇ ಓದೋದು ಅಪ್ಪಾ.

ಅಪ್ಪ: ಹಾಗಾದ್ರೆ ನಿದ್ದೆ ಯಾವಾಗ ಬರುತ್ತೆ?

ಪುಟ್ಟು: ಪುಸ್ತಕ ಹಿಡಿದ ತಕ್ಷಣವೆ..!

★★★

## ಆಕ್ಸಿಡೆಂಟ್

ಗುಂಡ: (ಪತ್ರಿಕೆ ಓದುತ್ತಾ) ಸಾರಿಗೆ ಬಸ್ಸು ಬಿದ್ದು ಐವರ ಸಾವು...

ಹೆಂಡತಿ: ಅಯ್ಯೋ.. ಹಾಗಾದ್ರೆ ಆ ಸಾರಿನ ಪಾತ್ರೆ ಇನ್ನೆಷ್ಟು ದೊಡ್ಡದಿತ್ತೀ...?

(ಸಂಗ್ರಹ): ಸುಮಾ ಕಳಸಾಪುರ, ಶಿವಮೊಗ್ಗ




